# ವಿಷಾದವಾಗಿ ಕಾಡುವ ದುರಂತ ನಾಯಕಿ



**ಆರ್. ತಾರಿಣಿ ಶುಭದಾಯಿನಿ**

ಕಲೆ: ಮುರಳೀಧರ್ ರಾಥೋಡ್



ನಾನು ಓದಿ ಆನಂದಪಟ್ಟ ಎಷ್ಟೋ ಕಥೆ ಕಾದಂಬರಿಗಳ ಪಾತ್ರಗಳು ಎದ್ದು ಮಾತಾಡಿಸುತ್ತಿರುತ್ತವೆ. ತೇಜಸ್ವಿಯವರ ಕಥೆಗಳ ಮಂದಣ್ಣ, ಪ್ಯಾರ, ಬಿರ್ಯಾನಿ ಕರಿಯಪ್ಪ ಮುಂತಾದ ಪಾತ್ರಗಳ ಜೊತೆ ತಾವೂ ಒಂದು ಪಾತ್ರವಾಗಿಬಿಟ್ಟ ತೇಜಸ್ವಿಗೆ ತಮ್ಮ ಕಥೆಗಳ ಪಾತ್ರಗಳೇ ಎದ್ದುಬಂದು ಪಂಚಾಯ್ತಿ ಮಾಡಿದ್ದುಂಟಂತೆ! ಹಾಗೆ ಬರೆದವರಿಗೆ ಸಹ ಕಾಡುವ ಪಾತ್ರಗಳು ಇರುವಾಗ ಸಾಮಾನ್ಯ ಓದುಗರ ಪಾಡೇನು? ಹಾಗೆ ನೋಡಿದರೆ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಾದವರಿಗೆ ಕಾಡುವ 'ರಾಜಾ'ಪಾತ್ರಗಳು ಹಲವಾರು ಇವೆ. ಕಥಾನಾಯಕ, ನಾಯಕಿಯರನ್ನು ಬಿಡಿ – 'ಕಾನೂರು ಹೆಗ್ಗಡಿತಿ'ಯ ಬಾಡುಗಳ್ಳ ಸೋಮ, 'ಒಡಲಾಳ'ದ ದುಪ್ಪಿ ಕಮಿಷನರ್, 'ಗ್ರಾಮಾಯಣ'ದ ಚಿಮಣಾ, ವೈಶಾಖದ ರುಕ್ಮಿಣಿ, 'ಸಂಸ್ಕಾರ'ದ ಚಂದ್ರಿ, 'ಗಂಗವ್ವ ಗಂಗಮಾಯಿ'ಯ ರಾಘಪ್ಪ, ಹೀಗೆ ಹಲವರು ಪೋಷಕ ಪಾತ್ರದಲ್ಲಿದ್ದರೂ ಕಾಡುತ್ತಿರುತ್ತಾರೆ. ಹೀಗೆ ಇರುವ ಅಸಂಖ್ಯಾತ ಪಾತ್ರಗಳಲ್ಲಿ ನನಗೆ ಕಾಡುವುದು ಕಾನೂರು ಸುಬ್ಬಮ್ಮ. ನಾವೆಲ್ಲ ಕುವೆಂಪು ಅವರ ಕವಿ ಪರಿಚಯ ಕಲಿಯುವಾಗ 'ಕಾನೂರು ಹೆಗ್ಗಡತಿ' ಎನ್ನುವುದನ್ನು 'ಕಾನೂರು ಹೆಗ್ಗಡಿತಿ ಸುಬ್ಬಮ್ಮ' ಎಂದೇ ಕಲಿಯುತ್ತಿದ್ದ ನೆನಪು. ಸುಬ್ಬಮ್ಮ ಅಲ್ಲಿಯೇ ಅಂಟಿಕೊಂಡು ಬಿಟ್ಟಿದ್ದಳು. ಯಾರಾದರೂ ಹೆಣ್ಣೆಂಬುದಕ್ಕೆ ಅನರ್ಥ, ವ್ಯಂಗ್ಯಾರ್ಥ ಹೇಳುವಂತಿದ್ದರೆ ಸುಬ್ಬಮ್ಮನನ್ನು ಧಾರಾಳವಾಗಿ ಬಳಸಿ ಹೇಳಬಹುದಾದ ಪಾತ್ರ ಅವಳದು. ಹೆಣ್ಣುಗಳ ಪ್ರತಿನಿಧಿಯೇ ಎಂದರೆ ತಕ್ಷಣ ಯಾರಾದರೂ ನಿರಾಕರಿಸಬಹುದಾದಂತಹ ಪಾತ್ರ ಸುಬ್ಬಮ್ಮನದು. ಸುಬ್ಬಮ್ಮ ತನ್ನ ಜೀವಮಾನವೆಲ್ಲ ಸವೆಸಿದ ರೀತಿ ಯಾರಿಗೂ ಆದರ್ಶವಲ್ಲ. ಸ್ವತಃ ಕಾದಂಬರಿ ಈಕೆಯ ಹೆಸರಿನಲ್ಲಿದ್ದರೂ ಎಲ್ಲವೂ ಅವಳ ವಿರುದ್ಧವೇ. ರೂಕ್ಷಸ್ವಭಾವದ ಹೆಣ್ಣು ಹೆಂಗಸು ಮಾಡಿದ್ದೆಲ್ಲ ಅನರ್ಥ! ತನ್ನ ಒಡಲಿನ ಆಸೆಯನ್ನು ಮೃಗಸ್ವರೂಪಿಯಾಗಿ ಮೂಲಭೂತ ಪ್ರವೃತ್ತಿಗಳ ರೂಪದಲ್ಲಿ ಪೂರೈಸಿಕೊಳ್ಳುವ ಸುಬ್ಬಮ್ಮ ಯಾಕಾದರೂ ಅಷ್ಟು ದೊಡ್ಡ ಕಾದಂಬರಿಯ ನಾಯಕಿಯಾದಳೊ ಏನೊ?! ದೇವರೇ ಬಲ್ಲ!

ಕುವೆಂಪು ಕಾದಂಬರಿಗಳಲ್ಲಿ ಬರುವ ನಾಯಕಿಯರು ಮೇಲ್ನೋಟಕ್ಕೆ ಧೀರೋದಾತ್ತ ಅನಿಸುವ ಮೂರ್ತಿಗಳಲ್ಲ. ಅವರಿಗೆ ಹೂವಯ್ಯನ ತರ ಅಸಾಧಾರಣ ತಾತ್ವಿಕ ಹಿನ್ನೆಲೆಯಿರುವುದು ಸಾಧ್ಯವೇ ಇಲ್ಲ. ಸಹಜವಾಗಿ ಸಂಭವಿಸುವಂತಹ ಜೀವನ ಘಟನೆಗಳಲ್ಲಿಯೇ ಹೆಣ್ಣಿನ ಅಸಾಧಾರಣ ಲಕ್ಷಣಗಳು ಪ್ರಕಟವಾಗಬೇಕಲ್ಲವೇ? ಹಾಗೆ ಸುಬ್ಬಮ್ಮನ ಪ್ರತಿಭೆ ಎನ್ನುವುದು ವ್ಯಕ್ತವಾಗುವುದು ಆಕೆ ಮಾಡುವ ಜಗಳ, ತಗಾದೆಗಳಲ್ಲಿ. ಎಷ್ಟು ಹೊಡೆತ ತಿಂದರೂ ಮತ್ತೆ ಮತ್ತೆ ತಪ್ಪನ್ನು ಮಾಡುವುದರಲ್ಲಿ! ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ನೂರು ರೂಪಾಯಿಯ ಹರಿದ ನೋಟನ್ನು